

# ಪಾಪಪ್ರಜ್ಞೆಯ ಸುಳಿಯಲ್ಲಿ

ಕಾನೂನಿನ ಕಣ್ಣಿಂದ ತಪ್ಪಿಸಿಕೊಳ್ಳಬಹುದು, ಆದರೆ ನಮ್ಮೊಳಗಿನ ನೈತಿಕಪ್ರಜ್ಞೆ ಎಂಬ ಕಾನೂನಿಕ ಕಣ್ಣಿಂದ ತಪ್ಪಿಸಿಕೊಳ್ಳುವುದು ಕಷ್ಟ ಎಂಬುದನ್ನು ಮನಸೊಳಗೆ ರಿಂಗಣಿಸುವ ಹಾಗೆ ಹೇಳುವ ಕಿರುಚಿತ್ರ 'ಗುಡ್ ಇಂಟೆನ್ಷನ್'.

■ ಗೌರಿ

'ಕೊಲೆಗಾರ ತನ್ನ ಕೊನೆಯ ದಿನಗಳಲ್ಲಿ ತಾನು ಕೊಂದ ಎಲ್ಲರ ಜೊತೆಗೂ ಬದುಕುತ್ತಿರುತ್ತಾನೆ' ಎಂಬರ್ಥದ ಸಾಲೊಂದು ರವಿ ದ್ರಾವಿಡ ಅವರ ಕವಿತೆಯಲ್ಲಿ ಬರುತ್ತದೆ.

ನಾವು ತಪ್ಪುಗಳನ್ನು ಮಾಡಲು ಯಾಕೆ ಹಿಂಜರಿಯುತ್ತೇವೆ? ಕಾನೂನಿನ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂಬ ಭಯಕ್ಕೋ? ಅಥವಾ ಆತ್ಮಸಾಕ್ಷಿ ತನ್ನನ್ನು ಚುಚ್ಚುತ್ತದೆ ಎಂಬ ಕಾರಣಕ್ಕೋ? ನಾವು ಹೆದರಬೇಕಾಗಿರುವುದು ಹೊರಗಿನ ಕಾನೂನು ವ್ಯವಸ್ಥೆಗೋ ಅಥವಾ ನಮ್ಮೊಳಗೇ ಇರುವ ನೈತಿಕ ಕಾನೂನೆಂಬ ಕನ್ನಡಿಗೋ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ತುಂಬ ಸಂಕೀರ್ಣವಾದದ್ದು. ಕೊನೆಗೂ ನಮ್ಮನ್ನು ನಿಜವಾಗಲೂ ಶಿಕ್ಷೆಗೊಳಪಡಿಸುವುದು ನಮ್ಮೊಳಗಿನ ನೈತಿಕ ಪ್ರಜ್ಞೆಯೇ. ಹಾಗಾಗಿಯೇ ಕೊಲೆಗಾರ ಕೊಂದ ವ್ಯಕ್ತಿಗಳು ಬೇರೆಲ್ಲಿಗೂ ಹೋಗುವುದಿಲ್ಲ. ಅವನೊಳಗೇ ಸೇರಿಕೊಂಡಿರುತ್ತಾರೆ. ಕೊನೆಗೆ ಅವನ ಕೊಲ್ಲುವ ಶಕ್ತಿ ನಶಿಸಿ ದುರ್ಬಲನಾಗುತ್ತ ಹೋದಂತೆಲ್ಲ ಅವನೊಳಗಿನ ಅವರು ಅವನನ್ನು ಪ್ರಶ್ನಿಸುತ್ತಾರೆ. ಚುಚ್ಚುತ್ತಾರೆ. ಮಾನಸಿಕವಾಗಿ ಜರ್ಜರಿತಗೊಳಿಸುತ್ತಾರೆ. ಅವನು ತನ್ನ ಕೊನೆಯ ದಿನಗಳನ್ನು ತಾನು ಕೊಂದವರು ನೀಡುವ ಶಿಕ್ಷೆಯನ್ನು ಅನುಭವಿಸುತ್ತಲೇ ಕಳೆಯುತ್ತಾನೆ. ಅದು ಪಾಪಪ್ರಜ್ಞೆಯ ಶಕ್ತಿ

'ಗುಡ್ ಇಂಟೆನ್ಷನ್' ಕೂಡ ಇಂಥ ಪಾಪಪ್ರಜ್ಞೆಯನ್ನು ಇಟ್ಟುಕೊಂಡು ಅದರ ಶಕ್ತಿಯನ್ನು ಕಾಣಿಸುವ ಆನಿಮೇಷನ್ ಕಿರುಚಿತ್ರ.

ಈ ಕಿರುಚಿತ್ರ ಶುರುವಾಗುವುದು ಒಂದು ಅಪಘಾತದಿಂದ. ರಸ್ತೆಯಲ್ಲಿ ಒಂದು ಆಕ್ಸಿಡೆಂಟ್ ಆಗುತ್ತದೆ. ಒಂದು ವಾಹನದಲ್ಲಿದ್ದವ ಗಾಯಗೊಂಡಿತ್ತಾನೆ. ಆ ವಾಹನಕ್ಕೆ ಗುದ್ದಿದ್ದ ಮಹಿಳೆ ಅಲ್ಲಿಂದ ತಪ್ಪಿಸಿಕೊಂಡು ಗಾಡಿ ಓಡಿಸಿಕೊಂಡು ಹೋಗಿಬಿಡುತ್ತಾಳೆ. ಆದರೆ ತಾನು ಮಾಡಿದ್ದು ಸರಿಯೇ ಎಂಬ ಪ್ರಶ್ನೆ ಅವಳಲ್ಲಿ ಬೆಳೆಯುತ್ತ ಹೋಗುತ್ತದೆ. ತಾನು ಗುದ್ದಿದ ವಾಹನದಲ್ಲಿ ಗಾಯಗೊಂಡು ರಕ್ತಸಿಕ್ತನಾಗಿ ಬಿದ್ದಿದ್ದ ವ್ಯಕ್ತಿ ಕಣ್ಮುಂದೆ ಬರುತ್ತಾನೆ. ಅದೇ ಪಾಪಪ್ರಜ್ಞೆ ಅವಳಲ್ಲಿ ಬೆಳೆದು ಬೆಳೆದು ಅವಳು ಹೋಗಿ ಬಂದಲ್ಲೆಲ್ಲ ಆ ವ್ಯಕ್ತಿಯೇ ಕಾಣಿಸಲಾರಂಭಿಸುತ್ತಾನೆ. ರಸ್ತೆಯಲ್ಲಿ ವಾಕಿಂಗ್ ಹೋಗುತ್ತಿದ್ದಾಗ, ರಸ್ತೆ ದಾಟುವಾಗ, ಶಾಪಿಂಗ್ ಮಾಡುತ್ತಿದ್ದಾಗ, ಕೊನೆಗೆ ಮನೆಯಲ್ಲಿ ಕನ್ನಡಿ ಮುಂದೆ ನಿಂತಾಗಲೂ ಅವನದೇ ಚಿತ್ರ ಕಂಡು ಕಾಡಲಾರಂಭಿಸುತ್ತದೆ.



**ಹೆಸರು:** ಗುಡ್ ಇಂಟೆನ್ಷನ್
**ನಿರ್ದೇಶನ:** ಅನ್ನಾ ಮಾಂಟ್‌ಜಾರಿಸ್
**ನಿರ್ಮಾಣ:** ಹ್ಯೂಗೋ ವಿಯಿಟೇಸ್
**ಸಂಗೀತ:** ಫಿಲ್ ಬ್ರೂಕ್ಸ್
**ಛಾಯಾಗ್ರಹಣ:** ಡೋನ್ನಾ ವಾಡೆ
**ಆನಿಮೇಷನ್:** ಟಿನ್ ಅಲೆನ್, ಕ್ವಿಂಟಿನ್ ಹೇಬರ್‌ಹ್ಯಾಮ್, ಟೋಬಿಯಾಸ್ ಪೊರೇಕರ್

ಹೀಗೆ ತಾನು ಮಾಡಿದ ತಪ್ಪಿನ ಹೊರೆಯನ್ನು ಅನುದಿನ ಅನುಕ್ಷಣ ಹೊತ್ತೇ ಬದುಕುವುದು ಕಷ್ಟವೆನಿಸಿ, ಮಹಿಳೆ ಆ ವ್ಯಕ್ತಿಯನ್ನು ಹುಡುಕಿ ಹೊರಡುತ್ತಾಳೆ. ಅವನು ಕೆಲಸ ಮಾಡುವ ಕಂಪನಿಗೇ ಹೋಗುತ್ತಾಳೆ.

ಇದು ಆನಿಮೇಷನ್ ಚಿತ್ರವಾದರೂ ಆ ಮಾಧ್ಯಮದ ಬಳಕೆಯಷ್ಟೇ, ಗಟ್ಟಿಯಾದ ಕಥನವನ್ನು ಕಟ್ಟುವ ಕಡೆಗೂ ನಿರ್ದೇಶಕರ ಗಮನವಿದೆ. ಅದನ್ನವರು ತುಂಬ ಗಟ್ಟಿಯಾಗಿ ಮತ್ತು ಘನವಾಗಿ ಕಟ್ಟಿದ್ದಾರೆ. ಕೊನೆ ಕೊನೆಯಲ್ಲಿ ಮಾಯಾವಾಸ್ತವವನ್ನು ಬಳಸಿಕೊಂಡಿರುವ ಕ್ರಮವಂತೂ ತುಂಬ ಸಮರ್ಥವಾಗಿದೆ. ತಾನು ಮಾಡಿದ ತಪ್ಪಿಗೆ ಮುಖಾಮುಖಿಯಾಗ ಹೊರಟ ಮಹಿಳೆ ಕೊನೆಯಲ್ಲಿ ಗೋಡೆಗಳನ್ನು ಸಲೀಸಾಗಿ ಹಾದುಹೋಗುವಷ್ಟು ಪಾರದರ್ಶಕ ಆಗುವುದು ಧ್ವನಿಪೂರ್ಣವಾಗಿದೆ. ಹಾಗೆ ಹುಡುಕಿಹೊರಟಿರುವುದು ಆ ಮಹಿಳೆ ಎಂದು ತೋರಿಸುತ್ತಲೇ, ಅದು ಮಹಿಳೆಯಲ್ಲ, ಮಹಿಳೆಯ ಮನಸಾಕ್ಷಿ ಎಂಬುದನ್ನೂ ಕಾಣಿಸುತ್ತಾರೆ ನಿರ್ದೇಶಕರು.

ಆನಿಮೇಷನ್ ಮಾಧ್ಯಮವನ್ನು ಬಳಸಿಕೊಂಡಿರುವ ರೀತಿಯೂ ಅಷ್ಟೇ ಸಮರ್ಥವಾಗಿದೆ. ಈ ಕಿರುಚಿತ್ರದಲ್ಲಿ ಒಂದೂ ಸಂಭಾಷಣೆ ಇರದಿದ್ದರೂ ಮಾತಿಗೂ ಮೀರಿದ ಧ್ವನಿಯನ್ನು ನಮ್ಮೊಳಗೆ ರಿಂಗಣಿಸುವ ಶಕ್ತಿಯನ್ನು ಕಿರುಚಿತ್ರ ಹೊಂದಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/37dPMG0 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.